## ಚಾಮರಾಜನಗರ ಜಿಲ್ಲೆಯ ಕುಂತೂರು ಮಹದೇಶ್ವರ ಸಕ್ಕರೆ ಕಾರ್ಖಾನೆಯ ಕಾರ್ಮಿಕರಿಗೆ ವೇತನ ಕುರಿತು

414(698) ಶ್ರೀ ಎ. ರಾಮದಾಸ್ (ಕೃಷ್ಣರಾಜ): ಮಾನ್ಯ ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಚಾಮರಾಜನಗರ ಜಿಲ್ಲೆಯ ಕುಂತೂರು ಮಹದೇಶ್ವರ ಸಕ್ಕರೆ ಕಾರ್ಖಾನೆಯಲ್ಲಿರುವ ಕಾರ್ಮಿಕರ ಸಂಖ್ಯೆ ಎಷ್ಟು?

ಆ. ಈ ಮಹದೇಶ್ವರ ಸಕ್ಕರೆ ಕಾರ್ಖಾನೆ ಕಾರ್ಯ ನಿರ್ವಹಿಸುತ್ತಿದೆಯೇ ಇಲ್ಲದಿದ್ದಲ್ಲಿ ಕಾರಣಗಳೇನು?

ಇ. ಕಾರ್ಖಾನೆಯ ಕಾರ್ಮಿಕರಿಗೆ ಕಳೆದ 13 ತಿಂಗಳುಗಳಿಂದ ಸಂಬಳವನ್ನು ನೀಡದೇ ಇರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ ಬಂದಿದ್ದಲ್ಲಿ ವೇತನ ನೀಡುವ ವಿಚಾರದಲ್ಲಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಈ. ವೇತನ ನೀಡದೇ ಇರುವುದರ ಜೊತೆಗೆ ಕಾರ್ಮಿಕರು ವಾಸಿಸುತ್ತಿದ್ದ ವಸತಿ ಗೃಹಗಳಿಗೆ ಕುಡಿಯುವ ನೀರು ಹಾಗೂ ವಿದ್ಯುತ್ ಸಂಪರ್ಕವನ್ನು ಸಹ ಕಡಿತ ಮಾಡಿರುವುದರಿಂದ ಕಾರ್ಮಿಕರಿಗೆ ಹಾಗೂ ಮಕ್ಕಳಿಗೆ ತೀರ್ವತೊಂದರೆಯಾಗಿದ್ದು ಈ ಬಗ್ಗೆ ಸರ್ಕಾರ ಯಾವ ಕ್ರಮವನ್ನು ಕೈಗೊಳ್ಳಲಿದೆ?

ಶ್ರೀ ಎಂ. ಮಹದೇವ್ (ಪಶುಸಂಗೋಪತಿ ಮತ್ತು ಸಕ್ಕರೆ ಸಚಿವರು)

ಅ. 407

ಆ. ಇಲ್ಲ

ಇದಕ್ಕೆ ಕಾರಣ, ಕಾರ್ಖಾನೆಯು ತನ್ನದೇ ಸಮಸ್ಯೆಗಳನ್ನು ಎದುರಿಸುತ್ತಿದೆ.

ಇ. ಬಂದಿದೆ.

ಕಾರ್ಮಿಕರಿಗೆ ವೇತನ ಪಾವತಿ ವಿಚಾರದ ಬಗ್ಗೆ ಪ್ರಕರಣವು ಬಾಂಬೆ ಉಚ್ಚ ನ್ಯಾಯಾಲಯದ ಮುಂದೆ ಬಾಕಿ ಇದ್ದು, ಈ ವಿಚಾರವಾಗಿ ಸದರಿ ನ್ಯಾಯಾಲಯವು "ರಿಸೀವರ್" ರವರನ್ನು ನೇಮಕ ಮಾಡಿರುತ್ತಾರೆ. ಅಲ್ಲದೆ ಈ ಬಗ್ಗೆ ಬಾಂಬೆ ಉಚ್ಚ ನ್ಯಾಯಾಲಯದ ಉಸ್ತುವಾರಿಯಲ್ಲಿ ಮುಂದಿನ ಕ್ರಮ ಜರುಗಿಸಬೇಕಾಗಿದೆ. ಆದ್ದರಿಂದ ಸದರಿ ನ್ಯಾಯಾಲಯದ ತೀರ್ಪಿಗಾಗಿ ನಿರೀಕ್ಷಿಸಲಾಗಿದೆ.

ಈ. ವಸತಿ ಗೃಹದ ಹಂಚಿಕೆದಾರರು ಪ್ರತ್ಯೇಕವಾಗಿ ವಿದ್ಯುತ್ ಮಂಡಳಿಯನ್ನು ಸಂಪರ್ಕಿಸಿದ ಪಕ್ಷದಲ್ಲಿ, ಮಾನವೀಯತೆ ದೃಷ್ಟಿಯಿಂದ ವಿದ್ಯುತ್ ಸರಬರಾಜನ್ನು ಮರು ಕಲ್ಪಿಸಲಾಗುವುದೆಂದು ವಿದ್ಯುತ್ ಮಂಡಳಿಯು ತಿಳಿಸಿದ ಮೇರೆಗೆ ಸದರಿ ವಿಷಯವನ್ನು ವಸತಿ ಗೃಹ ಹಂಚಿಕೆದಾರರ ಗಮನಕ್ಕೆ ತರುವಂತೆ ಜಿಲ್ಲಾಧಿಕಾರಿಗಳು ಚಾಮರಾಜನಗರ ಜಿಲ್ಲೆ, ಇವರು ಕಾರ್ಮಿಕ ಸಂಘದ ಮುಖ್ಯಸ್ಥರಿಗೆ ತಿಳಿಸಿರುತ್ತಾರೆ.

## ಕಂಬಾಲಪಲ್ಲಿ ಘಟನೆಯಲ್ಲಿ ಸಂತ್ರಸ್ತರಾದ ಕುಟುಂಬಗಳಿಗೆ ಸೌಲಭ್ಯ

415(700) ಶ್ರೀ ರಾಮ್‌ದಾಸ್ (ಕೃಷರಾಜ): ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಕಂಬಾಲಪಲ್ಲಿ ಘಟನೆಯಲ್ಲಿ ಸಂತ್ರಸ್ತರಾದ ಕುಟುಂಬಗಳು ಎಷ್ಟು?

ಆ. ಈ ಕುಟುಂಬಗಳಿಗೆ ಒದಗಿಸಲಾಗಿರುವ ಸೌಲಭ್ಯಗಳೇನು? ಇದಕ್ಕಾಗಿ ಎಷ್ಟು ಮನೆಗಳನ್ನು ನಿರ್ಮಿಸಲಾಗಿದೆ?

ಇ. ಸದರಿ ಘಟನೆಯಲ್ಲಿ ತೊಂದರೆಗೆ ಒಳಗಾಗದವರು ಕೂಡ ಸದರಿ ಸೌಲಭ್ಯಗಳನ್ನು ಪಡೆದುಕೊಂಡಿರುವುದು ನಿಜವೇ? (ವಿವರ ನೀಡುವುದು)

ಈ. ಸಂತ್ರಸ್ತಗೊಂಡವರಿಗೆ ಮನೆಗಳನ್ನು ಹಾಗು ಸೌಲಭ್ಯಗಳನ್ನು ನೀಡುವಾಗ ಅನುಸರಿಸಿದ ಮಾನದಂಡವೇನು?

ಉ. ಮನೆಗಳನ್ನು ಪಡೆದುಕೊಂಡಿದ್ದ ಕುಟುಂಬಗಳ ಪೈಕಿ ಎಷ್ಟು ಕುಟುಂಬಗಳು ಸದರಿ ಮನೆಗಳನ್ನು ಬಿಟ್ಟು ಬಂದಿದ್ದರೆ? ಕಾರಣಗಳೇನು?

ಶ್ರೀ ಎ. ಕೃಷ್ಣಪ್ಪ (ಸಮಾಜ ಕಲ್ಯಾಣ ಸಚಿವರು)

ಅ. ದಿನಾಂಕ 11-03-2000ರಂದು ಕಂಬಾಲಪಲ್ಲಿಯಲ್ಲಿ ನಡೆದದೌರ್ಜನ್ಯ ಘಟನೆಯಲ್ಲಿ ನೊಂದ ಪ.ಜಾತಿ ಸಂತ್ರಸ್ತ ಕುಟುಂಬಗಳು 66.

ಆ. ಕಂಬಾಲಪಲ್ಲಿ ಗ್ರಾಮದ ದುರ್ಘಟನೆಯಲ್ಲಿ ನೊಂದ ಸಂತ್ರಸ್ತ ಕುಟುಂಗಳಿಗೆ ಸರ್ಕಾರದಿಂದ ಈ ಕೆಳಕಂಡ ಸೌಲಭ್ಯಗಳನ್ನು ಒದಗಿಸಲಾಗಿದೆ:-

1. ದೌರ್ಜನ್ಯ ಘಟನೆಯಲ್ಲಿ ಮರಣ ಹೊಂದಿದ ಎಂಟು(8) ಜನರ ವಾರಸುದಾರರಿಗೆ ತಲಾ ರೂ. 1.50 ಲಕ್ಷದಂತೆ ಒಟ್ಟು ರೂ. 12.00 ಲಕ್ಷಗಳನ್ನು ಪರಿಹಾರ ಧನವನ್ನಾಗಿ ನೀಡಲಾಗಿದೆ.

2. ಮರಣ ಹೊಂದಿದ 8 ಸಂತ್ರಸ್ತ ಕುಟುಂಬದ ತಲಾ ಒಬ್ಬ ಸದಸ್ಯರಿಗೆ ಸಮಾಜ ಕಲ್ಯಾಣ ಇಲಾಖೆಯಲ್ಲಿ ಒಬ್ಬರಿಗೆ ನಿಲಯ ಮೇಲ್ವಿಚಾರಕರಹುದ್ದೆ ಮತ್ತು ಇನ್ನುಳಿದವರಿಗೆ ಅಡುಗೆ ಸಹಾಯಕರ ಹುದ್ದೆ ನೀಡಲಾಗಿದೆ.

3. 99 ಕುಟುಂಬಗಳಿಗೆ ರೂ. 20000ಗಳ ಘಟಕ ವೆಚ್ಚದಲ್ಲಿ 66 ಮನೆಗಳನ್ನು ನಿರ್ಮಿಸಿ ಕೊಡಲಾಗಿದೆ.

4. ಮೂಲಭೂತ ಸೌಲಭ್ಯಗಳಾದ ರಸ್ತೆ ನಿರ್ಮಾಣ ಭೀದಿ ದೀಪ ಇತ್ಯಾದಿಗಳನ್ನು ಕಲ್ಪಿಸಲಾಗಿದೆ.

5. ಕಿರುನೀರು ಸರಬರಾಜು ಕಲ್ಪಿಸಿಕೊಡಲಾಗಿದೆ.

6. 66 ಕುಟುಂಬಗಳಿಗೆ ಪ್ರತಿ ಕುಟುಂಬಕ್ಕೆ ತಲಾ 2 ಸೀಮೆ ಹಸುಗಳನ್ನು ನೀಡಲಾಗಿದೆ.

7. 66 ಕುಟುಂಬಗಳಿಗೆ ಪೈಕಿ 22; ಕುಟುಂಬಗಳ ಮಹಿಳೆಯರಿಗೆ ಹೊಲಿಗೆ ತರಭೇತಿಯನ್ನು ನೀಡಲಾಗಿದೆ.

8. 66 ಕುಟುಂಬಗಳಿಗೆ ಪ್ರತಿ ಕುಟುಂಬಕ್ಕೆ 2 ಎಕರೆಯಂತೆ ಒಟ್ಟು 132 ಎಕರೆ ಉಳುಮೆ ಜಮೀನು ಖರೀದಿಸಲು ಪ್ರತಿ ಎಕರೆಗೆ ರೂ. 45,000 ದಂತೆ ಒಟ್ಟು ರೂ. 59.82 ಲಕ್ಷ ಜಿಲ್ಲಾಧಿಕಾರಿಗಳಿಗೆ ಬಿಡುಗಡೆ ಮಾಡಿದ್ದು ಪ್ರಸ್ತುತ 66 ಕುಟುಂಬಗಳ ಪೈಕಿ 44 ಕುಟಂಬಗಳಿಗೆ ಪ್ರತಿ ಕುಟುಂಬಕ್ಕೆ 1 ಎಕರೆ 10 ಗುಂಟೆ ಉಳುಮೆ ಜಮೀನು ಖರೀದಿಸಿ ವಿತರಿಸಲಾಗಿದೆ.

ಇ. ನಿರ್ದಿಷ್ಟವಾದ ಪ್ರಕರಣ ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಈ. ಭಾರತ ಸರ್ಕಾರದ ಪ.ಜಾತಿ/ಪ.ಪಂಗಡಗಳ (ದೌರ್ಜನ್ಯ ನಿಷೇದ) ನಿಯಮಗಳನ್ವಯ ಸರಕಾರವು Model Contingency Plan ತಯಾರಿಸಿದೆ, ಸದರಿ Model Contingency

Plan ಅಡಿಯಲ್ಲಿ ವಿವಿಧ ದೌರ್ಜನ್ಯಗಳಿಗೆ ಮಂಜೂರು ಮಾಡಬೇಕೆಂದು ನಮೂದಿಸಲಾದ ಮಾನದಂಡಗಳ ಮೇಲೆ ಪರಿಹಾರ ಮಂಜೂರು ಮಾಡಲಾಗುತ್ತಿದೆ.

ಉ. ಸರ್ಕಾರದ ಮನೆಗಳ್ನು ಪಡೆದುಕೊಂಡ 99 ಪರಿಶಿಷ್ಟ ಜಾತಿ ಕುಟುಂಬಗಳ ಪೈಕಿ 22 ಕುಟುಂಬದವರು ವೈಯಕ್ತಿಕ ಕಾರಣಗಳಿಂದ ತಾತ್ಕಾಲಿಕವಾಗಿ ಮನೆಗಳನ್ನು ಬಿಟ್ಟಿರುತ್ತಾರೆ. ಈಗ ಮನೆ ಸದರಿ 22 ಕುಟುಂಬಗಳ ಪೈಕಿ 15 ಕುಟುಂಬಗಳು ಪುನಃ ಬಿಟ್ಟು ಹೋದ ಮನೆಗಳಿಗೆ ಮಾಪಸ್ಸು ಬಂದು ವಾಸ ಮಾಡುತ್ತಿದ್ದಾರೆ, ಉಳಿದ 7 ಕುಟುಂಬಗಳು ಸಹ ಪುನರ್ ಆಗಮಿಸುವ ನಿರೀಕ್ಷೆಯಿದೆ ಎಂದು ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿ, ಕೋಲಾರ ವರದಿ ಮಾಡಿರುತ್ತಾರೆ.

**ಗೋವಾದಿಂದ ಹೈದರಾಬಾದ್‌ಗೆ ರಾಜ್ಯದ ಮೂಲಕ ಹಾದು ಹೋಗುವ ಅನಿಲ ಕೊಳವೆ ಮಾರ್ಗದ ಯೋಜನೆಗೆ ಬಳಕೆಯಾಗಿರುವ ಭೂಮಿ ಬಗ್ಗೆ**

416(701) ಶ್ರೀ ರಾಮದಾಸ್. ಎ (ಕೃಷ್ಣರಾಜ): ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಮೆ: ಗ್ಯಾಸ್ ಟ್ರಾನ್ಸ್‌ಪೋರ್ಟೇಶನ್ ಮತ್ತು ಇನ್‌ಫಾಸ್ಟ್ರಕ್ಚರ್ ಕಂಪನಿಯು ಗೋವಾದಿಂದ ಹೈದರಾಬಾದ್‌ಗೆ ರಾಜ್ಯದ ಮೂಲಕ ಹಾದು ಹೋಗುವ ಅನಿಲ ಕೊಳವೆ ಮಾರ್ಗ ನಿರ್ಮಿಸುವ ಯೋಜನೆಗೆ ಅವಕಾಶ ನೀಡಿದೆಯೇ?

ಆ. ಈ ಮಾರ್ಗದ ಉದ್ದವೆಷ್ಟು; ಇದರಿಂದ ರಾಜ್ಯದ ಎಷ್ಟು ಎಕರೆಯ ಭೂಮಿ ಬಳಕೆಯಾಗಲಿದೆ, ರಾಜ್ಯದ ಯಾವ ಯಾವ ಜಿಲ್ಲೆಗಳ ಮೂಲಕ ಕೊಳವೆ ಮಾರ್ಗ ಹಾದುಹೋಗಲಿದೆ?

ಇ. ಈ ನಿರ್ಮಾಣ ಯೋಜನೆ ಸಿದ್ದತೆಗಾಗಿ ಪೂರ್ವ ಬಾವಿ ಸಭೆ ನಡೆಸಾಗಿದೆಯೇ, ಇದು ಅಪಾಯಕಾರಿ ಯೋಜನೆಯಲ್ಲಿವೆ, ಯಾವ ಸ್ವರೂಪದ ಅನಿಲವನ್ನು ಸಾಗಿಸಲು ಉದ್ದೇಶಿಸಲಾಗಿದೆ.

ಈ. ಇದರ ರಕ್ಷಣೆಗೆ ಸರ್ಕಾರ ಯಾವ ಮುಂಜಾಗರೂಕತೆ ಕ್ರಮ ಕೈಗೊಂಡಿದೆ ಹಾಗೂ ಸುರಕ್ಷಿತೆಗಾಗಿ ಸರ್ಕಾರ ಕಂಪನಿಗೆ ಯಾವ ನಿರ್ಭಂದಗಳನ್ನು ವಿಧಿಸಲಾಗಿದೆ?

ಶ್ರೀ ಆರ್.ವಿ. ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು)

ಅ. ಹೌದು

ಆ. ಈ ಮಾರ್ಗದ ಉದ್ದವು 660 ಕಿ.ಮೀ.ಗಳಾಗಿದ್ದು ರಾಜ್ಯದಲ್ಲಿ ಬೆಳಗಾಂ, ಬಿಜಾಪುರ ಗುಲ್ಬರ್ಗಾ ಮತ್ತು ಬೀದರ್ ಜಿಲ್ಲೆಗಳಲ್ಲಿ 171 ಕಿ.ಮೀ. ಗಳ ಉದ್ದಳತೆ ಇರುತ್ತದೆ. ಪೆಟ್ರೋಲಿಯಂ ಮತ್ತು ಖನಿಜ ವಸ್ತುಗಳ ಕಾಯಿದೆಯಂತೆ ಪೈಪ್ ಲೈನ್ ಅಳವಡಿಸಲು ಯೋಜನೆಗೆ ಭೂಮಿ ಉಪಯೋಗಿಸುವ ಹಕ್ಕನ್ನು ಮಾತ್ರ ನೀಡಲಾಗುವುದು. ಪೈಪ್ ಲೈನ್ ಹಾದಿಯಲ್ಲಿ ಕೆಲವು ಕಡೆ ಮಧ್ಯಂತರ ಸೌಕರ್ಯಗಳಾದ ವಾಲ್ವ್ ರಿಪೀಟರ್ ಸ್ಟೇಷನ್ಸ್ ಗಳನ್ನು ಸ್ಥಾಪಿಸಲು ಸ್ವಲ್ಪ ಜಮೀನನ್ನು ಮಾತ್ರ ನೀಡಲಾಗುವುದು.

ಇ. ರಾಜ್ಯ ಉನ್ನತ ಮಟ್ಟದ ಸಮಿತಿಯು ಅನುಮೋದನೆ ನೀಡುವ ಮೊದಲು ಯೋಜನೆಯನ್ನು ಸ್ಕ್ರೀನಿಂಗ್ ಕಮಿಟಿಯು ಕೂಲಂಕುಷವಾಗಿ ಪರಿಶೀಲಿಸಿರುತ್ತದೆ. ಯೋಜನೆಯ ಪ್ರವರ್ಗಕರುಗಳಿಗೆ ಸಂಬಂಧಪಟ್ಟ ಕಾಯಿದೆ ಮತ್ತು ನಿಯಮಾವಳಿಗಳಂತೆ ಜಾಗರೂಕತಾ: ಸುರಕ್ಷಿತ, ಕ್ರಮಗಳನ್ನು ತೆಗೆದುಕೊಳ್ಳಲು ಸೂಚಿಸಲಾಗಿರುತ್ತದೆ. ಪೈಪ್ ಲೈನ್ ಮುಖಾಂತರ ಕೃತಕ ಅನಿಲ ಮತ್ತು ಹೈಡ್ರೋಕಾರ್ಬನ್‌ಗಳನ್ನು ಸಾಗಣೆ ಮಾಡಲಾಗುವುದು.